ಸಮಸ್ಯೆಗಳಿಂದ ಕೂಡಿದ್ದುದರಿಂದ ಲಾಸಾದಲ್ಲಿಯೆ ತಂಗಿದ್ದು ದಲೈ ಲಾಮಾಗೆ ಭಾಷೆ ಮತ್ತು ಪಾಶ್ಚಿಮಾತ್ಯ ವಿಷಯಗಳ ಬಗ್ಗೆ ಪಾಠ ಹೇಳಿಕೊಂಡು ಏಳು ವರ್ಷಗಳ ಕಾಲ ಅಲ್ಲಿಯೆ ಉಳಿಯುತ್ತಾರೆ. ಹರರ್‌ಗೆ ನಮ್ಮೆಲ್ಲರ ದುರಂತ ಕತೆ ತಿಳಿದಿದ್ದರಿಂದಲೆ ಅವರು ನನ್ನನ್ನು ಮೊದಲು ಕಂಡಾಗ, ಬಹುಶಃ ಪಾಪಪ್ರಜ್ಞೆಯಿಂದ ಅವರ ಕಣ್ಣಲ್ಲಿ ಕರುಣಾ ಭಾವ ಕಂಡದ್ದು.

ಇನ್ನು ಇವರೇಕೆ ನಮ್ಮನ್ನು ಜರ್ಮನಿಗೆ ಕೊಂಡೊಯ್ಯಬೇಕಿತ್ತು? ನಮಗೆ ಅಲ್ಲಿ ಹೊಸ ಬದುಕು ಕಟ್ಟಿ ಕೊಡುವ ಉದ್ದೇಶದಿಂದಂತೂ ಅಲ್ಲವೆ ಅಲ್ಲ. ಬದಲಿಗೆ ತಮ್ಮ ನಾಜಿ ಆರ್ಯವೀರ್ಯದ ಬೀಜಗಳನ್ನು ಮತ್ತಷ್ಟು ಬಿತ್ತಿ ಬೆಳೆಸಲು ಅವರಿಗೆ ಅವಶ್ಯಕವಿದ್ದ ಶುದ್ಧ ಆರ್ಯರಕ್ತದ ಭೂಮಿಯನ್ನಾಗಿ ನಮ್ಮನ್ನು ಬಳಸುವ ಉದ್ದೇಶದಿಂದ! ಹೌದು. ಹತ್ತೂ ಹೆಂಗಸರಲ್ಲಿ ಅವರು ಈಗಾಗಲೆ ಆರ್ಯಬೀಜವನ್ನು ಬಿತ್ತಿದ್ದರು. ಹಾಗೆ ಬಿತ್ತಿದ ಕುಡಿಗಳಿಂದ ನಮ್ಮನ್ನು ಭಾವನಾತ್ಮಕವಾಗಿ ತಮಗೆ ಕಟ್ಟಿಹಾಕಿಕೊಂಡಿದ್ದರು. ಆ ಭಾವನಾತ್ಮಕ ಎಳೆಯನ್ನು ಬಳಸಿಯೆ ನಮ್ಮನ್ನು ದಾಹ್‌ಗೆ ಹೋಗುವಂತೆ ವಂಚಿಸಿದ್ದರು. ಅಲ್ಲಿಂದ ಜರ್ಮನಿಗೆ ಕರೆದೊಯ್ಯಲು ಯೋಚಿಸಿದ್ದರು. ಜರ್ಮನಿ ಸೇರಿದ ಮೇಲೆ ಹಲವು ನಾಜಿಗಳ ವೀರ್ಯ ಬಿತ್ತಿ ಬೆಳೆಯಲು ಫಲವತ್ತಾದ ಭೂಮಿಗಳು ನಾವಾಗಬೇಕಿತ್ತು ಅಷ್ಟೆ. ಆ ವೀರ್ಯದಾನಿಗಳ ಪಟ್ಟಿಯೂ ಅವರಲ್ಲಿ ಈಗಾಗಲೆ ತಯಾರಿಯಾಗಿರಲು ಸಾಧ್ಯ. ಆ ಪಟ್ಟಿಯಲ್ಲಿ ಯಾರು ಯಾರು ಇದ್ದರೋ ಯಾರಿಗೆ ಗೊತ್ತು? ಹಿಮ್ಲರ್? ಹಿಟ್ಲರ್?... ಇದೆಲ್ಲವೂ ತಿಳಿದದ್ದು ಗುರುಗಳು ಹರರ್ ಜೊತೆಗೆ ನಡೆಸಿದ ಒಡನಾಟದಿಂದ, ಹಾಗೂ ಬ್ರುನೋ ಬೆಗರ್‌ನನ್ನು ಭೇಟಿಯಾಗಿ ಪಡೆದ ವಿವರಗಳಿಂದ. ಹಾಗಾಗಿಯೆ ಜರ್ಮನ್ನರ ಷಡ್ಯಂತ್ರ ಸಫಲಗೊಂಡಿದ್ದಿದ್ದರೆ ಬಹುಶಃ ನಿಮ್ಮ ತಂದೆ ಜರ್ಮನಿಯಲ್ಲಿರುತ್ತಿದ್ದ ಶುದ್ಧ ಆರ್ಯವಂಶದ ರಕ್ತದ ಮಾದರಿಯಾಗಿ. ಆಗ ದಾಹ್‌ನ ಹೆಣ್ಣನ್ನು ಮದುವೆಯಾಗುವ ಸಾಧ್ಯತೆ ಇರಲಿಲ್ಲ. ಅಂದರೆ ನೀನು ಹುಟ್ಟುತ್ತಿರಲಿಲ್ಲ. ಹಾಗಾಗಿದ್ದಲ್ಲಿ ನಾನೂ ಅಲ್ಲಿರುತ್ತಿದ್ದೆ, ಆರ್ಯರಕ್ತವನ್ನು ವೃದ್ಧಿಸುವ ಉತ್ಪಾದನಾಯಂತ್ರವಾಗಿ.

ಒಟ್ಟಿನಲ್ಲಿ ಅಂತಹ ಪ್ರಪಂಚ ಪ್ರಸಿದ್ಧ ನಾಯಕರ ಆರ್ಯ ವಾಂಛೆಗೆ ಬಲಿಯಾಗಿದ್ದ ಪಶುಗಳು ನಾವು. ನಾವು ಆರ್ಯರೋ ಅಲ್ಲವೋ ನಮಗೇ ತಿಳಿಯದು. ಆದರೆ ಈ ಸ್ಕ್ಲಾಫರ್ ತಂಡದ ವಕ್ರದೃಷ್ಟಿಗೆ ಹಾಗೆ ಕಂಡದ್ದೇ ನಮಗೆ ಮುಳುವಾಯಿತು. ಹಾಗೆಂದೆ ಜೀವನದುದ್ದಕ್ಕೂ ನಾನು ಶಾಪ ಹಾಕುತ್ತಲೇ ಬಂದೆ: 'ನಿಜಕ್ಕೂ ಆರ್ಯರಿದ್ದಲ್ಲಿ, ಜರ್ಮನ್ನರು ಕಲ್ಪಿಸಿಕೊಂಡಿರುವ ಆರ್ಯರಕ್ತವಿದ್ದುದೇ ಆದಲ್ಲಿ, ಧಿಕ್ಕಾರವಿರಲಿ ಆ ಆರ್ಯರಕ್ತಕ್ಕೆ. ನಾಶವಾಗಲಿ ಆ ಆರ್ಯರಕ್ತ. ನಿರ್ನಾಮವಾಗಲಿ ಈ ಜರ್ಮನಿಯ ನಾಜಿ ಆರ್ಯರು' ಎಂದು.

ನನಗೆ ಅರಿವು ಮೂಡಿದಂತೆ, ಚರಿತ್ರೆಯಲ್ಲಿ ಇತ್ತೀಚೆಗಿನ ಬೆಳವಣಿಗೆಗಳನ್ನು ನಾನು ಅರ್ಥ ಮಾಡಿಕೊಳ್ಳತೊಡಗಿದೆ. ಜರ್ಮನ್ನರ ಆರ್ಯ ಕಲ್ಪನೆ ಎಷ್ಟು ಕ್ಷುಲ್ಲಕ, ಸ್ವಪ್ರತಿಷ್ಠೆಯ ದುಷ್ಫಲ ಹಾಗೂ ಅಭಾಸ ಎಂದು ತಿಳಿದೆ. ಆರ್ಯ ಎನ್ನುವುದು ಒಂದು ವಿಶಾಲವಾದ ಪರಿಕಲ್ಪನೆ. ಆರ್ಯರು ಎಂದರೆ ವೈವಿಧ್ಯಮಯ ಜನಾಂಗಗಳ, ವಿವಿಧ ಕಲೆಗಳ ಮತ್ತು ಸಂಸ್ಕೃತಿಗಳ, ಭಿನ್ನ ಭಿನ್ನ ಚಿಂತನೆಗಳ ಅಪೂರ್ವ ಸಂಗಮ ಎಂದೂ ತಿಳಿದೆ. ಚತುರ್ವರ್ಣಗಳಲ್ಲಿ ಕೇವಲ ಆಯ್ದ ಪಂಗಡಗಳಿಗೆ ಮಾತ್ರ ಆರ್ಯರು ಸೀಮಿತ ಎನ್ನುವುದು ಬ್ರಿಟಿಷರು ಹುಟ್ಟುಹಾಕಿದ ಹುಸಿಕಲ್ಪನೆಯಷ್ಟೆ. ನಿಜಕ್ಕೂ ಆರ್ಯರು ಎನ್ನುವುದು ಒಂದು ಪಂಗಡಕ್ಕೆ ಸೀಮಿತವಾದ ಜನಾಂಗವಲ್ಲ, ಬದಲಿಗೆ, ಆಗಿನ ಸರಸ್ವತಿ ನದಿಯ ತಟದ ಸುತ್ತ ಸಾವಿರಾರು ಚದರ ಕಿ. ಮೀ.ಗಳಲ್ಲಿ ಹರಡಿಕೊಂಡಿದ್ದ ಜನಸಮುದಾಯಗಳಲ್ಲಿ ಸಾವಿರಾರು ವರ್ಷಗಳ ಕಾಲ ನಡೆದ ಮುಕ್ತ ಚರ್ಚಾ